**CC 3212/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**<u>ಸಿಸಿ ನಂಬರ್ 3212/2023</u>**

**ಸಿ ಡಬ್ಲ್ಯೂ -4**
**ಪಿ ಡಬ್ಲ್ಯೂ -8**

| | |
|---|---|
| **ಸಾಕ್ಷಿಯ ಹೆಸರು -** | **ಶ್ವೇತಾ** |
| **ಗಂಡನ ಹೆಸರು -** | **ರಾಘವೆಂದ್ರ** |
| **ವಯಸ್ಸು -** | **32 ವರ್ಷಗಳು** |
| **ಉದ್ಯೋಗ -** | **ಖಾಸಗಿ ಕೆಲಸ** |
| **ವಾಸಸ್ಥಳ -** | **ಹೊಸಪೇಟೆ** |

**<u>ಸಾಕ್ಷಿಯನ್ನು ದಿನಾಂಕಃ 27-11-2025 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ</u>**

ಚಾಸಾ -1 ರವರ ಪರಿಚಯ ಇರತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುವುದಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಗಲಾಟೆ ನೋಡಿಲ್ಲ, ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ. ಆರೋಪಿ ಯಾರೆಂದು ನನಗೆ ಗೊತ್ತಿಲ್ಲ. ಈ ಪ್ರಕರಣ ಯಾರು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ಆರೋಪಿ ಚಾಸಾ -1 ರವರ ಗಂಡನಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಆರೋಪಿಯ ವಿರುದ್ಧ ಚಾಸಾ -1 ರವರು ಇದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ ಸಂದರೆ ನನಗೆ ಗೊತ್ತಿಲ್ಲ . ದಿಃ 27-05-2023 ರಂದು ಚಾಸಾ -1

ರವರು ನಮಗಂ ಮನೆಗೆ ಬಂದಿದ್ದರು ಅಂದರೆ ಸರಿಯಲಲ. ಸಂಜೆ 06.30 ಗಂಟೆಗೆ ನ್ಯಾಯಾಲಯದ ಮುಂದಿರುವ ಆರೋಪಿ ಅಲ್ಲಿಗೆ ಬಂದು ಜಗಳ ಮಾಡಿ 07.00 ಗಂಟೆಗೆ ಹೋದ ಅಂದರೆ ಸರಿಯಲ್ಲ. ಚಾಸಾ -1 ರವರಿಗೆ ಆರೋಪಿ ಕೈಗಳಿಂದ ಮೈ ಕೈಗೆ ಹೊಡೆದು ಗುದ್ದಿ ಎಳೆದಾಡಿ ಗೋಡೆಗೆ ಬೀಳುವಂತೆ ನೂಕಿ ಕೋರ್ಟ ನಲ್ಲಿ ನಡೆಯುತ್ತಿರುವ ಪ್ರಕರಣ ಹಿಂಪಡೆದುಕೋ ಎಂದು ಮತ್ತು ಹಿಂಪಡೆಯದಿದ್ದರೆ ಕೊಂದು ಹಾಕುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾನೆ ಅಂದರೆ ಸರಿಯಲ್ಲ. ನಾನು ಈ ಬಗ್ಗೆ ದಿಃ 30-05-2023 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ನೀಡಿಲ್ಲ ಎಂಬ ಹೇಳಿಕೆಯ ಭಾಗವನ್ನು ನಿಪಿಃ 10 ಎಂದು ಗುರುತಿಸಲಾಯಿತು. ನಿಪಿಃ 10 ರಂತೆ ಹೇಳಿಕೆ ನೀಡಿದ್ದರೂ ಸಹ ಇಲ್ಲಾ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಕೆ ಎನ್., ವಕೀಲರಿಂದ- ಇಲ್ಲಾ .**

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.